ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಜೀವಜಲ ಅಪ್ಲಿಕೇಶನ್ ಮೂಲಕ ಗ್ರಾಮೀಣ ಜನರಿಗೆ ಸುರಕ್ಷಿತ ನೀರು ಒದಗಿಸುವ ಸೌಲಭ್ಯಕ್ಕೆ ಆಧುನಿಕ ಸ್ಪರ್ಶ ನೀಡಿದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರನ್ನು ಪೂರೈಸುವುದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಕೇಂದ್ರ ಸರ್ಕಾರದ ಯೋಜನೆಯಾದ ಜಲ ಜೀವನ್ ಮಿಷನ್ ರಾಜ್ಯದಲ್ಲಿ ಮನೆ ಮನೆಗೆ ಗಂಗೆ ಎಂಬ ಹೆಸರಿನಡಿಯಲ್ಲಿ ಕಾರ್ಯಾಚರಣೆಯಲ್ಲಿದೆ. ಗ್ರಾಮೀಣ ಜನರಿಗೆ ಶುದ್ಧ ಸುರಕ್ಷಿತ ನೀರನ್ನು ಒದಗಿಸುವ ಮೂಲಕ ಗ್ರಾಮೀಣರ ಜೀವನ ಮಟ್ಟವನ್ನು ಸುಧಾರಿಸುವ ಗುರಿಯನ್ನು ಯೋಜನೆ ಹೊಂದಿದೆ.

ಪರೀಕ್ಷಿತ ಸುರಕ್ಷಿತ ನೀರನ್ನುಗ್ರಾಮೀಣ ಜನರಿಗೆ ಪೂರೈಸುವ ಮೂಲಕ ಅವರ ಆರೋಗ್ಯವನ್ನು ಕಾಪಾಡುವುದು ಇಲಾಖೆಯ ಜವಾಬ್ದಾರಿಯಾಗಿದೆ. ಹೀಗಾಗಿ ರಾಜ್ಯದಲ್ಲಿ ನೀರಿನ ಗುಣಮಟ್ಟ ಪರೀಕ್ಷೆಗೆ ಸಂಬಂಧಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನೀರು ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಿರುವುದಷ್ಟೆ ಅಲ್ಲದೆ, ಎಲ್ಲಾ ಗ್ರಾಮಗಳಲ್ಲಿ FTK (ಫೀಲ್ಡ್ ಟೆಸ್ಟ್ ಕಿಟ್) ಮೂಲಕ ನೀರಿನ ಪರೀಕ್ಷೆ ಅಭಿಯಾನ ಕೈಗೊಂಡಿದೆ.

ಗ್ರಾಮ ಪಂಚಾಯಿತಿ ಸಿಬ್ಬಂದಿ, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರು, ಆಶಾ/ಅಂಗನವಾಡಿ ಕಾರ್ಯಕರ್ತೆಯರಿಗೆ FTK (ಫೀಲ್ಡ್ ಟೆಸ್ಟ್ ಕಿಟ್) ಮೂಲಕ ನೀರಿನ ಪರೀಕ್ಷೆ ನಡೆಸುವ ತರಬೇತಿಯನ್ನು ನೀಡಲಾಗಿದ್ದು, **ಈವರೆಗೆ 5 ಲಕ್ಷಕ್ಕೂ ಹೆಚ್ಚು ನೀರಿನ ಮಾದರಿಗಳನ್ನು ಪರೀಕ್ಷಿಸಲಾಗಿದೆ.** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಡಿ **ಒಟ್ಟು 42 ರಾಸಾಯನಿಕ** ಹಾಗೂ **8 ಮೈಕ್ರೋ ಬಯಾಲಜಿ** ಪ್ರಯೋಗಾಲಯಗಳಿದ್ದು, ನಿರಂತರವಾಗಿ ಈ ಪ್ರಯೋಗಾಲಯಗಳು ನೀರಿನ ಗುಣಮಟ್ಟ ಪರೀಕ್ಷೆ ನಡೆಸುತ್ತಿವೆ.




## ನೀರಿನ ಸಮಗ್ರ ಮೇಲ್ವಿಚಾರಣೆ ಮತ್ತು ಕಣ್ಗಾವಲಿಗಾಗಿ ಜೀವಜಲ ಆ್ಯಪ್ ಬಿಡುಗಡೆ

ನೀರಿನ ಗುಣಮಟ್ಟ ಪರೀಕ್ಷೆಗೆ ಆಧುನಿಕ ಸ್ಪರ್ಶ ನೀಡಲು ಮುಂದಾಗಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಇದೀಗ ಆಧುನಿಕ ತಂತ್ರಜ್ಞಾನದೊಂದಿಗೆ "ಜೀವಜಲ" ಎಂಬ ಅಪ್ಲಿಕೇಷನ್ ಮತ್ತು ವೆಬ್ ಪೋರ್ಟಲ್ ಅನ್ನು ಪರಿಚಯಿಸಿದೆ. ಪ್ರಸ್ತುತ ದಿನಗಳಲ್ಲಿ ಹವಾಮಾನ ಬದಲಾವಣೆ, ಬದಲಾಗುತ್ತಿರುವ ಮಳೆಯ ಮಾದರಿ ಮತ್ತು ಅನೈರ್ಮಲ್ಯತೆಯ ಕಾರಣದಿಂದ ಉಂಟಾಗುತ್ತಿರುವ ನೀರಿನ ಕಲುಷಿತ ಪ್ರಕರಣಗಳನ್ನು ತಡೆಗಟ್ಟಲು ದೇಶದಲ್ಲೇ ಮೊದಲ ಬಾರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮಾದರಿಗಳ ಸಂಗ್ರಹಣೆ, ನೀರಿನ ಗುಣಮಟ್ಟದ ಪರೀಕ್ಷೆ ಮತ್ತು ಗ್ರಾಮೀಣ ಜನರಿಗೆ ನೀರಿನ ಗುಣಮಟ್ಟದ ಕುರಿತು ಸರಳ ರೀತಿಯಲ್ಲಿ ತಿಳಿಸುವ ನಿಟ್ಟಿನಲ್ಲಿ, ಕುಡಿಯುವ ನೀರಿನ ಸಮಗ್ರ ಮೇಲ್ವಿಚಾರಣೆ ಮತ್ತು ಕಣ್ಗಾವಲಿಗಾಗಿ ವಿನೂತನ ತಂತ್ರಜ್ಞಾನದೊಂದಿಗೆ "ಜೀವಜಲ" ಎಂಬ ಮೊಬೈಲ್ ಅಪ್ಲಿಕೇಷನ್ ಮತ್ತು ವೆಬ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಲಾಗಿದೆ.

**ಜೀವಜಲ; ಸುರಕ್ಷಿತ ನೀರಿನ ಸಂಕಲ್ಪ**

"ಜೀವಜಲ" ಮೊಬೈಲ್ ಅಪ್ಲಿಕೇಷನ್ ನಲ್ಲಿ ನೀರಿನ ಗುಣಮಟ್ಟ ಪ್ರಯೋಗಾಲಯಗಳ ನೋಂದಣಿ, ಪ್ರಯೋಗಾಲಯಗಳ ಸಿಬ್ಬಂದಿಗಳ ನೋಂದಣಿ, ಗ್ರಾಮಗಳಿಗೆ ಮಾದರಿ ಸಂಗ್ರಾಹಕರ ನಿಯೋಜನೆ, ಜಿಯೋ ಟ್ಯಾಗಿಂಗ್ ಮೂಲಕ ಹಾಜರಾತಿ ನೋಂದಣಿ ಸೇರಿದಂತೆ ಮಾದರಿ ಸಂಗ್ರಾಹಕರು ತಾವು ಸಂಗ್ರಹಣೆ ಮಾಡುವ ನೀರಿನ ಮೂಲಗಳ ವಿವರ, ಮಾದರಿ ವಿವರಗಳ ದೃಢೀಕರಣ ಹಾಗೂ ಪರೀಕ್ಷಾ ಪ್ರಯೋಗಾಲಯದ ವರದಿಗಳನ್ನು ಸಬ್ ಮಿಟ್, ಡೌನ್ ಲೋಡ್ ಹಾಗೂ ವೀಕ್ಷಿಸುವ ಸೌಲಭ್ಯಗಳು ಲಭ್ಯವಿದೆ. ಜೀವಜಲ ಅಪ್ಲಿಕೇಶನ್ ಅಭಿವೃದ್ಧಿ ಪಡಿಸುವ ಮೂಲಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಗ್ರಾಮೀಣ ಜನರಿಗೆ ಶುದ್ಧ, ಸುರಕ್ಷಿತ ನೀರು ಒದಗಿಸುವ ಸಂಕಲ್ಪಕ್ಕೆ ಆಧುನಿಕ ಸ್ಪರ್ಶ ನೀಡಿದೆ. ನೀರಿನ ಗುಣಮಟ್ಟ ಕುರಿತಾದ ಅಂಕಿ-ಅಂಶ ಗಳನ್ನು ದಾಖಲಾತಿಗಳನ್ನು ಇಡಲು ಮತ್ತು ಶುದ್ಧ ಸುರಕ್ಷಿತ, ಪರೀಕ್ಷಿತ ನೀರು ಸರಬರಾಜನ್ನು ಖಾತ್ರಿಪಡಿಸಿಕೊಳ್ಳಲು ಇದು ಅನುಕೂಲವಾಗಿದೆ.

8277506000
ಏಕೀಕೃತ ಸಹಾಯವಾಣಿ